**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಬಂಗಾರಪೇಟೆ**

**ಸಿಸಿ ಸಂಖ್ಯೆ 2451/2022 ಚಾಸಾಃ 1 ಪ್ರಾಸಾಃ 1**

**ಸಾಕ್ಷಿಯನ್ನು ದಿಃ 25.11.2022 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಹೆಸರುಃ | ಇಂದ್ರಾಣಿ |
| ಗಂಡನ ಹೆಸರುಃ | ರಂಗನಾಥ |
| ವಯಸ್ಸುಃ | 52 ವರ್ಷ |
| ವೃತ್ತಿಃ | ವ್ಯವಸಾಯ |
| ವಾಸ ಸ್ಥಳಃ | ತನಿಮಡುಗು ಗ್ರಾಮ |

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ನನಗೆ ಚಾಸಾ–2 ರಿಂದ 7 ರವರು ಗೊತ್ತು, ಆರೋಪಿತರು ಗೊತ್ತು. ನಮ್ಮ ಮತ್ತು ಆರೋಪಿತರ ನಡುವೆ ಜಮೀನಿನ ವಿಚಾರವಾಗಿ ಮಾತಿನ ಚಕಮಕಿಯಾಗಿದ್ದು, ಈ ಬಗ್ಗೆ ಬಂದೋಬಸ್ತ್ ಮಾಡಿಕೊಡುವಂತೆ ಪೊಲೀಸರಲ್ಲಿ ಕೋರಿದಾಗ, ಪೊಲೀಸರು ಕೆಲವೊಂದು ದಾಖಲೆಗಳಿಗೆ ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ. ಸಾಕ್ಷಿಗೆ ದೂರು ಹೇಳಿಕೆಯನ್ನು ತೋರಿಸಲಾಗಿ ಅದರಲ್ಲಿರುವ ಅವರ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ದೂರು ಹೇಳಿಕೆಯನ್ನು ನಿ ಪಿ 1 ಎಂದು, ಸಾಕ್ಷಿಯ ಸಹಿಯನ್ನು ನಿ ಪಿ 1(ಎ) ಎಂದು ಗುರುತಿಸಲಾಯಿತು.

ದಿಃ11.06.2022 ರ ಪಂಚನಾಮೆಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ಸದರಿ ಪಂಚನಾಮೆಯನ್ನು ನಿ ಪಿ 2 ಎಂದು, ಸಾಕ್ಷಿಯ ಸಹಿಯನ್ನು ನಿ ಪಿ 2(ಎ) ಎಂದು ಗುರುತಿಸಲಾಯಿತು. ನಿ ಪಿ 2 ರಲ್ಲಿ ಬರೆದಿರುವ ಅಂಶಗಳು ನನಗೆ ಗೊತ್ತಿಲ್ಲ.

ಆರೋಪಿತರು ಅಕ್ರಮ ಪ್ರವೇಶ ಮಾಡಿ ಹಲ್ಲೆ ಮಾಡಿ, ಅವಾಚ್ಯ ಶಬ್ಧಗಳಿಂದ ಬೈದು, ಕೊಲೆ ಬೆದರಿಕೆ ಹಾಕಿರುವುದಿಲ್ಲ. ಈ ಬಗ್ಗೆ ನಾನು ಪೊಲೀಸರಿಗೆ ಯಾವುದೇ ದೂರು ಹೇಳಿಕೆ ಕೊಟ್ಟಿರುವುದಿಲ್ಲ. ಪೊಲೀಸರು ಯಾವುದೇ ಪಂಚನಾಮೆ ಮಾಡಿರುವುದಿಲ್ಲ.

(ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕೆಂದು ಎ.ಪಿ.ಪಿ.ರವರು ಕೋರಿರುತ್ತಾರೆ. ಅದರಂತೆ ಅನುಮತಿ ನೀಡಿದೆ.)

**ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ದಿನಾಂಕಃ10.06.2022 ರಂದು ಬೆಳಗ್ಗೆ 8.00 ಗಂಟೆ ಸಮಯದಲ್ಲಿ ನಾನು, ಚಾಸಾ-2 ಮತ್ತು 3 ರವರು ಟ್ರ್ಯಾಕ್ಟರ್ ನಿಂದ ನಮಗೆ ಸೇರಿದ ತನಿಮಡುಗು ಗ್ರಾಮದ ಸರ್ವೇ ನಂಬರ್ 17/1 ಮತ್ತು 16 ಜಮೀನುಗಳಲ್ಲಿ ಉಳುಮೆ ಮಾಡುತ್ತಿದ್ದಾಗ, ಆರೋಪಿಗಳು ನನ್ನ ಜಮೀನಾದ ಸರ್ವೇ ನಂಬರ್ 16 ರೊಳಗೆ ಅಕ್ರಮ ಪ್ರವೇಶ ಮಾಡಿದರು ಎಂದರೆ ಸರಿಯಲ್ಲ ಕಲ್ಲುಗಳನ್ನು ತೆಗೆದುಕೊಂಡು, ನನ್ನ ಮತ್ತು ಚಾಸಾ-2 ರವರನ್ನು ಕುರಿತು ಯಾರೋ ನನ್ನ ಮಗನೇ, ಜಮೀನಿನಲ್ಲಿ ಬಂದು ಉಳುಮೆ ಮಾಡುವುದಕ್ಕೆ ನೀನು ಎಂದು ಕೇಳಿದರು ಎಂದರೆ ಸರಿಯಲ್ಲ. ಉಳುಮೆ ಮಾಡುತ್ತಿದ್ದ ಚಾಸಾ-3 ರವರ ಟ್ರ್ಯಾಕ್ಟರ್ ಅನ್ನು ನಿಲ್ಲಿಸಿದರು ಎಂದರೆ ಸರಿಯಲ್ಲ. ಆಗ ನಾನು ಆರೋಪಿಗಳನ್ನು ಕುರಿತು ನಮ್ಮ ಜಮೀನನ್ನು ನಾವು ಉಳುಮೆ ಮಾಡುತ್ತಿದ್ದೇವೆ, ನೀವು ಯಾರು ಕೇಳುವುದಕ್ಕೆ ಎಂದಾಗ ಮೂರೂ ಜನ ಕೋರ್ಟ್ ನಲ್ಲಿ ಕೇಸು ಹಾಕಿದ್ದೇವೆ, ನಮ್ಮಂತೆ ಕೇಸು ಆಗಿದೆ ಎಂದು ಹೇಳಿ, ನನ್ನನ್ನು ಕೆಳಗಡೆ ತಳ್ಳಿ, 2 ನೇ ಆರೋಪಿಯು ನನಗೆ ಕೈಗಳಿಂದ ಹೊಡೆದು ಸಾಯಿಸಿಬಿಡುತ್ತೇನೆಂದು ಬೆದರಿಕೆ ಹಾಕಿದ ಎಂದರೆ ಸರಿಯಲ್ಲ. ತೆಲುಗಿನಲ್ಲಿ ನನ್ನನ್ನು ಕುರಿತು "ನೀಯಮ್ಮ ಲಂಜ, ಗಾಡಿದ" ಎಂದು ಕೆಟ್ಟ ಮಾತುಗಳಿಂದ ಬೈದನು ಎಂದರೆ ಸರಿಯಲ್ಲ. ಉಳುಮೆ ಮಾಡದೇ ಜಮೀನಿನಿಂದ ಹೊರಗಡೆ ಹೋಗದೆ ಇದ್ದರೆ ನಿಮ್ಮನ್ನು ಸಾಯಿಸಿಬಿಡುತ್ತೇವೆಂದು ಪ್ರಾಣ ಬೆದರಿಕೆ ಹಾಕಿದರು ಎಂದರೆ ಸರಿಯಲ್ಲ. ಈ ಬಗ್ಗೆ ಈಗ ಓದಿ ಹೇಳಿದಂತೆ ನಾನು ನಿ ಪಿ 1 ರಂತೆ ಪೊಲೀಸರಿಗೆ ದೂರು ಹೇಳಿಕೆಯನ್ನು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

ದಿನಾಂಕಃ11.06.2022 ರಂದು ನಾನು ತೋರಿಸಿದಂತೆ ಕೃತ್ಯ ನಡೆದ ಸ್ಥಳವನ್ನು ಪೊಲೀಸರು ಪರಿಶೀಲನೆ ಮಾಡಿ, ಪಂಚರ ಸಮಕ್ಷಮ ನಿ ಪಿ 2 ರಂತೆ ಪಂಚನಾಮೆಯನ್ನು ಬರೆದುಕೊಂಡರು ಎಂದರೆ ಸರಿಯಲ್ಲ. ಈಗ ಓದಿ ಹೇಳಿದಂತೆ ಮರು ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸದರಿ

ಮರು ಹೇಳಿಕೆಯನ್ನು ನಿ ಪಿ 3 ಎಂದು ಗುರುತಿಸಲಾಯಿತು. ಆರೋಪಿತರು ನಮ್ಮ ಸಂಬಂಧಿಕರು ಎಂದರೆ ಸರಿ. ಆ ಕಾರಣದಿಂದ ಆರೋಪಿತರೊಂದಿಗೆ ರಾಜೀ ಮಾಡಿಕೊಂಡಿದ್ದೇನೆ ಎಂದರೆ ಸರಿ, ಆ ಕಾರಣದಿಂದ ಈಗ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಂ.ಪಿ.ಆರ್. ವಕೀಲರಿಂದಃ**

ಪಾಟೀ ಸವಾಲು ಇರುವುದಿಲ್ಲ ಎಂದು ನಿವೇದಿಸಿಕೊಂಡಿರುತ್ತಾರೆ.

**ಮರು ವಿಚಾರಣೆಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ).**

**ಓ ಹೇ ಕೇ ಸರಿ ಇದೆ.**

**(ಅಜಿತ್ ದೇವರಮನಿ)**
**ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಬಂಗಾರಪೇಟೆ.**